## ಬಂಬೈಗೆ ಹೊಂಟು ನಿಂತವರು

### ಇಲ್ಲಿಯವರೆಗೆ



ತುಳಜಾ ಹೆಣವನ್ನು ಮಣ್ಣು ಮಾಡಿದ ಮೇಲೆ ತಿಪ್ಪಣ್ಣ ಸಾಧುಸಂತರ ಜತೆ ಸೇರಿ ಮನೆ ಬಿಟ್ಟ. ಗಿನ್ಯಾನಿ ಗೌಡನ ಮನೆಗೆ ಹೋಗಿ ಛೀಮಾರಿ ಹಾಕಿದಳು. ಗೌಡ ಆಳುಗಳನ್ನು ಕರೆಸಿ ಆಕೆಯನ್ನು ಹೊರದಬ್ಬಿದ. ಕೇರಿಯೆಲ್ಲ ತಿಪ್ಪಣ್ಣ–ಗಿನ್ಯಾನಿ ಮನೆಗೆ ಬರದ ಸುದ್ದಿ ಹರಿದಾಡಿತು. ದೇವಿ, ದೇವರ ಮೇಲೆ ಜನರ ನಂಬಿಕೆ ಹೋಯಿತು. ಜಾತ್ರೆಗೆ ಬರಲೂ ಕೇರಿ ಮಂದಿ ಹೆದರಿ ಮನೆಗಳಲ್ಲೇ ಉಳಿಯತೊಡಗಿದರು.

ಜಾತ್ರೆ, ದೇವರು ದಿಂಡರು ಎಲ್ಲ ಮುಗಿದು ಮಳೆಗಾಲ ಬಂತು. ಆದರೆ ಒಂದು ಹನಿ ನೀರು ಬೀಳದೆ ಮಂದಿ ಕಂಗೆಟ್ಟರು.

ಇಬ್ರಾಹಿಂ ಸಾಬನದೇ ಖಾಸಾ ಎಡ್ಡು ದೊಡ್ಡ ದೊಡ್ಡ ಲಾರಿಗೋಳಿದ್ದುವು. ಅದರಲ್ಲೇ ಅವರನ್ನು ಬಂಬೈನ ಕೆಲಸದ ಜಾಗಕ್ಕೆ ಒಯ್ದು ತಲುಪಿಸುತ್ತೇನೆಂದು ಆಳಿಗೆ ಸೆಂಬೋರು ರುಪ್ಪೈ ಚಾರ್ಜು ನಿಗದಿಪಡಿಸಿದ್ದ. ಹಂಗೇ ಅಲ್ಲಿ ಅವರಿಗಿ ದಗದಾ ಹಚ್ಚಿ ಕೊಟ್ಟಿದ್ದಕ್ಕ ಕಮೀಸನ್ನಂತ ಆಳಿಗೆ ಅವರು ದುಡಿದ ಒಂದು ಆಠವಾಡಾದ ಪಗಾರ ತನಗ ಅಡ್ವಾನ್ಸಾಗಿ ಕುಡ್ಬೇಕೆಂದೂ ಅದನ್ನು ಕೆಲಸ ಮಾಡಿಸಿಕೊಳ್ಳೋ ಸೇಠನಿಂದ ಈಸ್ಗೊಳೋದಾಗಿ ಹೇಳಿದ. ಹಿಂಗಾಗಿ ಸುರುವಿನ ಒಂದು ವಾರ ಅವರು ಪುಕ್ಕಟೆ  ದುಡಿಯಲು ನಿರ್ವಾಯಿಲ್ಲದೆ ಒಪ್ಪಿಕೊಳ್ಳಲೇಬೇಕಾಯ್ತು. ‘ಅಲ್ಲಿ ನಮಗ ದಿನಕ್ಕೇಸು ರುಪ್ಪೈ ಕೂಲಿ ಕುಡ್ತಾರ‍್ರಿ ಸಾಬ್ರೇ...’ ಅಂತ ಒಬ್ಬಾಂವ ಕೇಳಿದ. ‘ನಿಮ್ ಧಂದಾ ನೋಡಿ ಕುಡ್ತಾರ... ಏನಿಲ್ಲಂದ್ರೂ ದಿನಕ್ಕ ಗಂಡಾಳಿಗಿ ಬೀಸ, ಹೆಣ್ಣಾಳಿಗಿ ದಸ್ ರುಪ್ಪೈಯಂತೂ ಕಮ್ಮಸಕಮ್ ಕುಡ್ತಾರ...’ ‘ನಿಮಗ ಒಂದು ಪೂರಾ ಆಠವಾಡದ ಪಗಾರ ಕೊಟ್ಟು ನಾವೇನು ತಿನ್ಬೇಕ್ರೀ ಸಾಬ್ರೇ... ಕಮೀಸನ್ನು ಒಂದೀಟು ಕಮ್ಮಿ ಮಾಡ್ಕೋರೀ ಸಾಬ್ರೇ...’ ಅಂತಂದು ಅವನು ಕೈ ಜೋಡಿಸಿದ. ಇಬ್ರಾಹಿಂ ಸಾಬನ ಬಿಳಿ ಮಾರಿಯಂಬೋದು ಸಿಟ್ಟಿನಿಂದ ಜಾಜ ಬರ‍್ಸದಂಗ ಲಾಲ್ ಲಾಲ್ ಆಯ್ತು. ಕಣ್ಣು ಕೆಂಪಗ ಮಾಡ್ಕೊಂಡು ಗಡ್ಡಾ ಮೀಸಿ ಕುಣಿಸುತ್ತ ಒದರ‍್ಯಾಡಿದ. ‘ಏನಂದಿ ಬೇಕೂಫ? ನಿಮಗ ಕರ‍್ಕೊಂಡೊಯ್ದು ಕೆಲಸಾನೂ ಕುಡಸ್ಬೇಕು. ಮತ್ತ ಲಾರ‍್ಯಾಗನೂ ಒಯ್ಯಬೇಕು... ಇಲ್ಲಿದ್ರ ಖಾನಾ ಪೀನಾ ಇಲ್ದೆ ನಾಯಿ ನರಿಗೋಳಂಗ ಸಾಯ್ತಿರಲ್ಲ ಪಾಪ ಅಂತ ನಿಮ್ಯಾಲ ಮೆಹರಬಾನಿ ಮಾಡಿದ್ರ ಕಮೀಸನ್ನು ಕಮ್ಮಿ ಮಾಡಂತ ಕೇಳ್ತಿರ‍್ಯಾ ... ನಾ ಹೇಳ್ದೋಟು ಪೂರಾ ಕುಡಂಗಿದ್ರ ಬರ‍್ರಿ ಇಲ್ಲಂದ್ರ ಬ್ಯಾಡ ಹೋಗ್ರಿ... ನಿಮ್ಮ ನಸೀಬದಾಗ ಇಲ್ಲೇ ಭೂಕಾ ಮರನಾ ಹೈತೋ ಮರೋ...’ ಅಂದನು. ಮಂದೆಲ್ಲಾ ಗಾಬರ‍್ಯಾದ್ರು. ‘ಆಯ್ತು ಸಾಬ್ರೇ... ಸಿಟ್ಟಿಗಿ ಬರಬ್ಯಾಡ್ರೀ ತಂದೀ... ಗರಜಕೋ ಅಖ್ಖಲ್ ನಹಿ ಅಂತಾರಪ್ವೋ ಸಾಬೂ... ನೀ ಹೇಳ್ದೋಟು ಕುಡ್ತಿವಂತ, ಯಾವಾಗ ಬರಾಮಿ...’ ಅಂತ ಕೇಳಿದರು ಕೆಲವರು.

‘ಹೂ... ಹಿಂಗ್ ಬರ‍್ರಿ ದಾರೀಗೀ...  ನಾಳಿಗಿ ಸಂಜಿಮುಂದ ಇಲ್ಲೇ ಬರ‍್ರಿ... ಇಲ್ಲಿಂದೇ ಲಾರಿಗೋಳದಾಗ ಕುಂತು ಹೋಗಕೆಂತ್ರಿ... ನಂ ಪಾರುಗೋಳು ನಿಮಗ ಕರ‍್ಕೊಂಡೊಯ್ದು ಬಿಡ್ತಾರ... ಮತ್ತ ಇದು ಆ ಸೇಠರ ಜೋಡಿ ನಮ್ದುಕು ಒಂದೊರ್ಸಿನ ಮುದ್ದತ್ತಿನ ಕರಾರಿರ‍್ತಾದ... ನಡಬರಕ ನೀವು ಯ್ಯಾರರೇ ಕೆಲ್ಸಾ ಬಿಟ್ಟು ವಾಪಸ್ಸು ಓಡಿ ಬಂದ್ರಿ ಅಂದ್ರ ಹರಾಮಿಗೋಳೇ ನಿಮಗ ಎಲ್ಲಿದ್ದರನೂ ತಲಾಶ ಮಾಡಿ ತಂದು ಒದ್ದು ಕುಂಡಿ ಎಲು ಮುರಸ್ತೀನಿ ಹುಷಾರ...!’ ಅಂದನು. ‘ನಾವ್ಯಾಕ ಇಲ್ಲಿಗಿ ಸಾಯ್ಲಿಕ್ಕ ಬರೋಣ್ರೇಯಪ್ಪಾ... ಅಲ್ಲಿದ್ದೇ ಬದಕ್ತೇವಂತ... ಬರ್ತೀವ್ರೀ ಸಾಬ್ರೇ...’ ಅಂತಂದು ಎಲ್ಲೋರೂ ಅಲ್ಲಿಂದ ಜಾಗ ಖಾಲಿ ಮಾಡಿದ್ರು.

ಹಿಂಗ ಬಂದ ಮಂದಿಗೆ ಕಲಬುರ್ಗಿಯಾಗಿರಲು ಜಾಗ ಇರಲಿಲ್ಲ. ಬಸ್ ಸ್ಟ್ಯಾಂಡಿನ್ಯಾಗೋ, ರೇಲ್ವೆ ಠೇಸನ್ನಿನ ಹೊರ ಬದಿಯ ಬಯಲಿನ್ಯಾಗೋ, ಶಾಣಬಸ್ಸಪ್ಪನ ಗುಡಿ ಪಾಳ್ಯಾಗೋ ಇಲ್ಲಾ ರಸ್ತಾದ ಬದಿಯ ಫುಟ್‌ಪಾತ್ ಮ್ಯಾಲೊ ರಾತ್ರಿ ಕಳೆಯುತ್ತಿದ್ದರು. ಬೆಳಗಾ ಮುಂಜಾನೆದ್ದು ಅಲ್ಲೇ ಬಯಲಿನಲ್ಲಿ ಮೂರು ಕಲ್ಲುಯಿಟ್ಟು ಒಲೆ ಹೂಡಿ, ಸುತ್ತಲಿನ ಚಿಂದಿ, ಚಿಪಾಟಿ, ರದ್ದಿ ಕಾಗದ, ಕಸ, ಕಡ್ಡಿ ತಂದು ಒಲೆಗೆ ಉರಿ ಹಾಕಿ ಒಂದೀಟು ಕೂಳು ಬೇಯ್ಸಿಕೊಂಡು ತಿಂದು, ಉಳಿದ ಅಡಿಗೆ, ಪಾತ್ರೆ ಪಗಡಗಳನ್ನು ಗಂಟು ಕಟ್ಟಿಕೊಂಡು, ಕೆಲಸ ನಡೆಯುವ ಜಾಗಕ್ಕೆ ಸಂಸಾರ ಕಟ್ಟಿಕೊಂಡು ಹೋಗುತ್ತಿದ್ದರು.

ಇಬ್ರಾಹಿಂ ಸಾಬಿಯ ಲಾರಿಯೊಳಗ, ಊರು ಬಿಡೋ ಮಂದಿ ಯಾರೂ ಇವತ್ತು ದಗದಕ್ಕೆ ಹೋಗಲಿಲ್ಲ. ಸಂಜೀತನ ಎಲ್ಲ ಸವರಿಸಿಕೊಂಡು ಹೊತ್ತು ಮುಳುಗಲು ಇನ್ನೂ ತಾಸೊತ್ತಿರುವಾಗಲೇ ಒಬ್ಬೊಬ್ಬರಾಗಿ ಎಲ್ಲೋರೂ ತಂತಮ್ಮ ಹೆಂಡ್ರು ಮಕ್ಕಳು, ಸಾಮಾನು ಸರಂಜಾಮುಗೋಳನ್ನು ನೆತ್ತಿ ಮ್ಯಾಲೆ ಹೊತ್ತುಕೊಂಡು ಸಾಬಿಯ ಬಂಗಲೆಯ ಮುಂದಿನ ಅಪರಂಪಾರದ ಬಯಲಿನಲ್ಲಿ ಬಂದು ಸೇರಲಾರಂಭಿಸಿದರು. ಇದೇ ಟೋಳಿಯೊಳಗ ನಮ್ಮ ಸಿರಿಮಂತ, ಹೊನ್ನಮ್ಮ ಮಗಳು ನೀಲೂನೂ ಇದ್ದರು.

ದೆವ್ವಿನಂಥಾ ಲಾರಿಗಳೆಡ್ಡು ಭಯಂಕರ ಆವಾಜು ಮಾಡುತ್ತ ಬಂದು ಬಯಲ ತುದಿಗೆ ನಿಂತುವು. ಡರೆವರುಗೋಳು ಬಂಗಲೆಯೊಳಗ ಹೋಗಿ ತಮ್ಮ ಮಾಲಕನ ಜತಿ ಮಾತಾಡಿ ಬಂದರು. ಸಾಬಿಯ ಮಗ ಅವರ ಹಿಂದೆನೇ ಬಂದನು, ಡರೆವರ ಬಂದದ್ದು ಕಂಡು ಮಂದೆಲ್ಲ ಎದ್ದು ನಿಂತು ತರಾ ತುರಿ ಮಾಡಿದರು. ಸಾಬರ ಮಗ ಗದರಿಸಿದ, ‘ಏs... ಒಂದೊಂದು ಕುಟುಂಬದೋರು ಲೈನಾಗಿ ನಿಂತು ಪಾಳಿ ಮ್ಯಾಲ ನನ್ ಮುಂದ ಬರ‍್ರಿ... ಡರೆವರ ಮಿಂಯಾ... ತುಮ ಜಾಕೆ ಲೈನ್ ಲಗಾಕೆ ಆನೆ ಕೋ ಬೋಲೋ... ನೀನೂ ಅಲ್ಲೇ ನಿಂತು ಒಬ್ಬೊರಿಗಿ ಬಿಡು ಇಕಾಡಿ...’ ಅಂದನು. ಡರೆವರ ಬಾಬು ಪಾಳಿಯ ಪ್ರಕಾರ ಒಬ್ಬೊಬ್ಬರನ್ನೇ ಅವರವರ ಕುಟುಂಬದ ಮಂದಿಯೊಂದಿಗಿ ಸಾಬಿಯ ಮುಂದ ಕಳಿಸತೊಡಗಿದ.

ಕುಟುಂಬದ ಯಜಮಾನ ಬಂದು ನಿಂತಾಗ ಸಾಬಿ ಕೇಳಿದ. ‘ಕಿತನೆ ಆದಮಿ ಹೈ...?’ ‘ನಾನೂ ನನ್ಹೆಣ್ತಿ ಮತ್ತ ಮೂರು ಮಂದಿ ಮಕ್ಕಳಿದ್ದಿವ್ರೀ ಯಪ್ಪಾ...’ ‘ಏs ಕುಲ್ ಮಿಲಾಕೆ ಕಿತನಾ ಬೋಲ್...’ ‘ಏನಂದ್ರಿ ಸಾಬ್ರೇ...’ ಹಳ್ಳಿಯಂವ ಕಕ್ಕಾಬಿಕ್ಕಿಯಾದಾಗ ಡರೆವರ ಬಾಬು ಕನ್ನಡದಾಗ ಕೇಳಿದ. ‘ಒಟ್ಟು ಟೋಟಲ್ ಏಸು ಮಂದಿ ಅಂತ ಹೇಳಪಾ...’ ‘ಹ್ಯಾಂಗರ‍್ಯಾ... ಒಟ್ಟು ಐದು ಮಂದಿ ಇದ್ದೀವ್ರೀ...’ ‘ಪಾಂಚ ಲೋಗ... ಪಾನಸೆ ರುಪ್ಪೈ ದೇವ...’ ಅಂದನು, ಹಳ್ಳಿಯ ಹಿರಿಯ ಕಂಗಾಲಾದನು.

‘ಸಾಬ್ರೇ... ನನ್ ಮಕ್ಕಳು ಸಣ್ಣು ಅವಾರೀ... ಅವ್ರೀಗಿ ಹಾಫ್ ತಿಕೀಟಲ್ರಿ...’ ಕೇಳಿದ. ಬಸ್ಸಿನಲ್ಲಿ ಹೋಗಿ ಬರೋವಾಗ ಸಣ್ಣ ಹುಡುಗರಿಗೆ ಹಾಫ್ ಟಿಕೇಟು ತಗೊಳ್ಳೋದು ಆ ಹಿರಿಯನಿಗೆ ಗೊತ್ತಿತ್ತು. ‘ಏs ಹರಾಮಖೋರ್... ಇದೇನು ಸರಕಾರಿ ಬಸ್ಸಂತ ತಿಳ್ಕೊಂಡೆನೆಲೋ... ಇಲ್ಲಿ ಎಲ್ಲೋರಿಗೂ ಅಂದ್ರ ಬಡೆ, ಛೋಟೆ ಸಬಕೋ ಫುಲ್ ಟಿಕೇಟ ರೊಕ್ಕಾ ಕುಡ್ಬೇಕಾಗ್ತಾದ. ಗಾಡಿಗಿ ಡಿಸೇಲು, ಡ್ರೇವರಿಗಿ ಪಗಾರ ಎಲ್ಲಾ ಯಾರು ನಿಮ್ಮಪ್ಪ ಕುಡ್ತಾನೇನು... ಕುಡ್ತ್ಯಾಯಿಲ್ಲೋ... ಇಲ್ಲಂದ್ರ ನಡಿ ಹೊರಗ... ಡ್ರೇವರ ದೂಸರೊಂಕೋ ಕಳಿಸು...’ ಅಂದಾಗ ಹಳ್ಳಿಯಂವನು ಗಡಬಡಿಸಿ ‘ಕುಡ್ತಿನ್ರೀ ಯಪ್ಪಾ...’ ಅಂತನ್ನುತ್ತ ತನ್ನ ಬನೀನಿನ ಕಿಸೆಯಿಂದ ಪಾನಸೆ ರುಪ್ಪೈ ತಗ್ದು ಎಡ್ಡಡ್ಡು ಸಾರಿ ಎಣಿಸಿ ಕೊಟ್ಟನು. ‘ಹೋಗಪಾ... ನೀವು ಆ ಮುಂದಿನ ಲಾರ‍್ಯಾಗ ಕೂಡ್ರಿ...’ ಅಂತಂದು ಡರೆವರ ಬಾಬು ಅವನನ್ನು ಕಳಿಸಿದನು.

ಈ ಸುರುವಿನ ಪ್ರಕರಣದಿಂದ ಹಿಂದ್ ನಿಂತಿದ್ದವರೆಲ್ಲೋರೂ ಹುಷಾರಾದ್ರು. ಯಾರೂ ಮತ್ತೇನೂ ಕೇಳಲಿಲ್ಲ. ಕುಟುಂಬದ ಸಣ್ಣ ಮಕ್ಕಳಿಗೂ ತಲಾ ಸೆಂಬೋರು ರುಪ್ಪೈಗೋಳನ್ನು ಗಪಚಿಪ್ಪಾಗಿ ಕೊಟ್ಟರು. ತಳ್ಳಳ್ಳಿಯಿಂದ ಬಂದಿದ್ದ ಶಿವಪ್ಪನ ಹೆಣ್ತಿ ಚಂದ್ರಿ ಮೆಲ್ಲಗ ಕೇಳಿದ್ಳು. ‘ಯಪ್ಪಾ... ನನ್ ಕಡೀ ಮಗಾ ಇನ್ನಾ ಎಡ್ಡೊರ್ಸಿನ ಕೂಸದಾರೀ... ಮಲಿ ಕುಡಿತಾದ ಇನ್ನಾ... ಅದಕ್ಕ ಅದ್ದಾ ಟಿಕೇಟು ಕೊಟ್ಟರ ನಡೀತಾದೇನೆಪ್ಪ ಸಾಬೂ...’ ‘ಏs ಕ್ಯಾ ಬೋಲ್ತಿ ವೋ...? ಎಡ್ಡ್ಯಾಕ ಇನ್ನಾ ಬಾರಾ ಸಾಲ ತನಕಾ ನಿನ್ ಮಗನಿಗಿ ಮಲಿ ಕುಡ್ಸು... ನಮ್ಗೇನು. ನಮ್ದುಕು ಪೂರಾ ಫುಲ್ಲ ಟಿಕೇಟಿನ ಸೆಂಬೋರು ರುಪ್ಪೈ ಕುಡ್ಬೇಕು ನೋಡು. ಇಲ್ಲಂದ್ರ ಆ ಬಚ್ಚಾಗ ಅರ್ಧಾ ಇಲ್ಲೇ ಬಿಟ್ಟು ನಡಿ... ಇಲ್ಲಂದ್ರ ಆಧಾ ದಾರ‍್ಯಾಗೇ ಇಳ್ಸಿ ಬಿಡ್ತಾನ ಅಂವಗ ನಮ್ಮ ಡ್ರೈವರು... ಮಂಜೂರಾ?’ ಕೇಳಿ ನಕ್ಕನು.

ಎಲ್ಲೋರೂ ಗೊಳ್ಳೆಂದು ನಕ್ಕರು. ಎಲ್ಲೋರೂ ಅಂದ್ರ ಡರೆವರಗೋಳು, ಕಿನ್ನರಗೋಳು ಮತ್ತ ಇದೆಲ್ಲಾ ನೋಡ್ಲಿಕ್ಕೆಂತ ಹೊರಗ ಬಂದು ನಿಂತಿದ್ದ ಆ ಬಂಗ್ಲೆಯ ನೌಕರರು ಆಟೇ... ಅಲ್ಲೇ ವರಾಂಡದಾಗ ಒಂದು ಆರಾಮ ಕುರ್ಚಿ